ಸುಶೀಲಮ್ಮನಿಗೆ ತನ್ನ ಕಣ್ಣು ಕಿವಿಗಳನ್ನು ನಂಬಲಾಗಲಿಲ್ಲ. ಆಕೆ ಬಾಗಿ ಪುರೋಹಿತರ ಕಾಲು ಮುಟ್ಟಿ ನಮಸ್ಕರಿಸುತ್ತಾ ನೀವು ನಿಜಕ್ಕೂ ದೇವರೇ! ಎಂದು ಹೇಳಬೇಕೆಂದುಕೊಂಡರೂ ಹೇಳಲಾಗದೇ ಬಿಕ್ಕಳಿಸಿದರು.

ಪುರೋಹಿತರಿಗೆ ಮುಜುಗರವಾಯಿತು. 'ಇಂಥದ್ದನ್ನೆಲ್ಲ ಮಾಡಬಾರದು ನೀನು' ಎಂದು ಆಕೆಯನ್ನು ಸಂತೈಸಿ ಒಳಗೆ ಹೋಗಿ 'ಮಧ್ಯಾಹ್ನದ ಹೊತ್ತು ಬಂದಿದ್ದಿ, ಊಟ ಮಾಡದೆ ಹೋಗಬಾರದು' ಎಂದು ಸುಶೀಲಮ್ಮನಿಗೆ ಕೇಳಿ ಅಂಗಳದ ಚಪ್ಪರದ ಕಂಬಕ್ಕೆ ಒರಗಿ ನಿಂತಿದ್ದ ಕೂಲಿಯಾಳು ಬಡವಕುಞ್ಞ ಬ್ಯಾರಿಯಲ್ಲಿ 'ಸಂಜೆ ಹೊತ್ತು ಈ ದನವನ್ನು ಕೊಂಡು ಹೋಗಿ ಅವರ ಹಟ್ಟಿಯಲ್ಲಿ ಕಟ್ಟಿ ಬಾ' ಎಂದು ಅವನಿಗೆ ಆದೇಶಿಸಿದರು.

ಬಡವಕುಞ್ಞ ಬ್ಯಾರಿ ಹಲವಾರು ವರುಷಗಳಿಂದ ಗೋಪಾಲ ಭಟ್ಟರಲ್ಲಿಗೆ ದಿನಗೂಲಿಗೆ ಬರುವ ವ್ಯಕ್ತಿ. ಮೊದಲು ಭಟ್ಟರ ಜಮೀನಿಗೆ ಆತ ಬಿಡು ಒಕ್ಕಲಾಗಿ ಬಂದು ಆಮೇಲೆ ಅಲ್ಲೇ ನೆಲೆ ನಿಂತು ಭಟ್ಟರು ಉಚಿತವಾಗಿ ನೀಡಿದ ಹತ್ತು ಸೆಂಟ್ಸ್ ಸ್ಥಳದಲ್ಲಿ ಒಂದು ಮನೆ ಕಟ್ಟಿ ಈಗ ಸ್ವತಂತ್ರನಾಗಿದ್ದಾನೆ. ಆದರೂ ಭಟ್ಟರ ತೋಟ ಗದ್ದೆಗಳ ಕೆಲಸಕ್ಕೆಲ್ಲ ಅವನೇ ಇಂದಿಗೂ ಮುಕ್ತಿ (ಯಜಮಾನ). ಭಟ್ಟರ ಅಡಿಕೆ ತೋಟದಲ್ಲಿ ವರುಷಪೂರ್ತಿ ಕೆಲಸ ಇಲ್ಲದೇ ಇರುವುದರಿಂದ ಆತ ಸಣ್ಣ ಪುಟ್ಟ ಕೃಷಿ ಕಾಯಕದ ಗುತ್ತಿಗೆಯನ್ನು ಸುತ್ತಮುತ್ತಲಲ್ಲಿ ಅದೂ ಮುಖ್ಯವಾಗಿ ಹವ್ಯಕ ಬ್ರಾಹ್ಮಣರಲ್ಲಿ ವಹಿಸಿಕೊಳ್ಳುತ್ತಾ ಬಂದಿದ್ದಾನೆ. ಇಂಥ ತೋಟ ಗದ್ದೆಗಳ ಕೆಲಸಗಳ ಜೊತೆಗೆ ಆತ ಮತ್ತೆ ಹೊಸತಾಗಿ ಬಾವಿ ತೆಗೆಯುವುದು, ಕಟ್ಟಪುಣಿ ಕಟ್ಟುವುದು, ಸುರಂಗ ಹಾಕುವುದು ಇತ್ಯಾದಿಗಳಲ್ಲಿ ಸದಾ ತೊಡಗಿಸಿಕೊಳ್ಳುತ್ತಿದ್ದುದೂ ಈಚೆಗೆ ಪ್ರಾರಂಭವಾಗಿತ್ತು. ಇದರಿಂದಾಗಿ ಆತನಿಗೆ ಹತ್ತು ಹದಿನೈದು ಮಂದಿ ಕೂಲಿಯಾಳುಗಳನ್ನು ಕಲೆ ಹಾಕಿ ಕೆಲಸ ಮಾಡಿಸುವ ಚಾಕಚಕ್ಯತೆ ಒದಗಿ ಬಂತು. ಅದರಿಂದಾಗಿ ಊರಮಂದಿ ಅರ್ಜೆಂಟಾಗಿ ಆಗಬೇಕಾದ ಯಾವುದೇ ಕೆಲಸಕ್ಕೂ ಅವನನ್ನೇ ಅವಲಂಬಿಸುತ್ತಿದ್ದರು. ಈ ಕಾರಣದಿಂದ ಆತ ಈಗ ಸ್ವಲ್ಪ ಸ್ಥಿತಿವಂತನಾದ ಮತ್ತು ಅವನಿಗೆ ಮೇಸ್ತ್ರಿ ಎಂಬ ಅಡ್ಡ ಹೆಸರೂ ಬಂದು ಬಿಟ್ಟಿತು!. ಆದರೂ ಆತ ಆ ಬಿರುದನ್ನು ತನ್ನ ತಲೆಗೇರಿಸಿಕೊಳ್ಳದೆ, ಕೂಲಿ ಕೆಲಸಕ್ಕೆ ಹೋಗುವುದನ್ನು ಈಗಲೂ ಮುಂದುವರಿಸಿದ್ದ ಮತ್ತು ಈಗ ಆರು ಮಕ್ಕಳ ತಂದೆಯಾಗಿದ್ದರೂ ತನ್ನ ಮಕ್ಕಳಿಗೆ ಒಳ್ಳೆ ಶಿಸ್ತು ಮತ್ತು ಸಂಸ್ಕಾರವನ್ನು ಕಲಿಸಿದ್ದ. ಅವನ ದೊಡ್ಡ ಮಗ ದುಬಾಯಿಯಲ್ಲಿ ಈಗ ಡ್ರೈವರಾಗಿ ಕೆಲಸ ನಿರ್ವಹಿಸುತ್ತಿದ್ದರೂ, ಅವನು ಊರಿಗೆ ಬಂದಾಗಲೆಲ್ಲ ಗೋಪಾಲಭಟ್ಟರ ಮನೆ ಬಾಗಿಲಿಗೆ ಹೋಗಿ ಹಿಂದಿನ ಹಾಗೇ ಅವರು ಜಗಲಿಯಲ್ಲಿ ಕುಳಿತು 'ದಾನೆ ಅಣ್ಣೆರೆ' ಎಂದು ಗೋಪಾಲಭಟ್ಟರ ಕಷ್ಟಸುಖ ವಿಚಾರಿಸುತ್ತಿದ್ದ.

ಬಡವಕುಞ್ಞ ಮತ್ತು ಇನ್ನಿಬ್ಬರು ಸುಶೀಲಮ್ಮನ ಮನೆಗೆ ದನ ತಂದು ಕಟ್ಟಿ ಹೊರಡುವಾಗ 'ಅಕ್ಕರೇ, ನಿಮ್ಮ ದನಕ್ಕೆ ಅದು ಇದು ಎಂದು ಕಸಾಲೆ ಕಾಯಿಲೆ ಬಂದರೆ ನನಗೆ ನೀವು ಹೇಳಿ ಕಳುಹಿಸಬೇಕು. ಅಲ್ಪಸ್ವಲ್ಪ ಜಾನುವಾರಿಗೆ ಮದ್ದು ಕೊಡಲು ನನಗೆ ಗೊತ್ತುಂಟು' ಎಂದು ಹೇಳಿ 'ನಮ್ಮ ಮನೆಯ ಹಿಂದಿನ ಗುಡ್ಡದಲ್ಲಿ ಬೊಳ್ಳೆಸೊಪ್ಪು ಬೇಕಾದಷ್ಟು ಇದೆ ನೋಡಿ. ಅದು ದನಗಳಿಗೆ, ಅದರಲ್ಲೂ ಹಾಲು ಕರೆಯುವ ದನಗಳಿಗೆ ತುಂಬಾ ಒಳ್ಳೆಯದು' ಎಂದ. ಸುಶೀಲಮ್ಮ 'ಹೌದಾ?' ಎಂದು ನಕ್ಕು, ನಿಮ್ಮಿಂದ ತುಂಬಾ ಉಪಕಾರವಾಯ್ತು ಎಂದು ಬಡವಕುಞ್ಞಗೆ ಚಾ ಮಾಡಿಕೊಟ್ಟು 'ನಿಮ್ಮ ಮನೆಯಾಚೆ ಬೊಳ್ಳೆಸೊಪ್ಪಿಗೆ ನಾನು ಬರುವುದು ಕಷ್ಟ ಸಾಧ್ಯ' ಎಂದು ಹೇಳಿ 'ಈ ದಾರಿಯಲ್ಲಿ ನೀವು ಹೋಗುವ ಸಂದರ್ಭ ಒದಗಿ ಬಂದರೆ ತಲೆ ಹೊರೆಯಲ್ಲಿ ಒಂದಷ್ಟು ಸೊಪ್ಪನ್ನು ನೀವು ತಂದು ಹಾಕಿದರೆ ಅದರ ಮಜೂರಿಯನ್ನು ನಾನು ಕೊಟ್ಟೇನು' ಎಂದರು.

ಅದಕ್ಕೆ ಬಡವಕುಞ್ಞ ಬ್ಯಾರಿ 'ಈಗ ಆ ವಿಚಾರ ಬೇಡ' ಎಂದು ನಕ್ಕು ಸುಶೀಲಮ್ಮನ ಹಟ್ಟಿಗೆ ದನ ಹೊಡೆದುಕೊಂಡು ಬಂದ ಮಜೂರಿಯನ್ನು ಎಷ್ಟು ಒತ್ತಾಯಿಸಿದರೂ ತೆಗೆದುಕೊಳ್ಳಲಿಲ್ಲ. ಆಮೇಲೆ ಆ ದಾರಿಯಲ್ಲಿ ಹೋಗುವಾಗಲೆಲ್ಲ ಆತ ತನ್ನ ಜೊತೆ ಇರುವ ಕೂಲಿಯಾಳುಗಳ ತಲೆಯಲ್ಲಿ ಎರಡು ಕಟ್ಟು ಬೊಳ್ಳೆಸೊಪ್ಪನ್ನು ತಪ್ಪದೇ ಹೊರಿಸಿ ತಂದು ಸುಶೀಲಮ್ಮನ ಹಟ್ಟಿಯಲ್ಲಿ ಹಾಕತೊಡಗಿದ. ಮುಂದೆ ಒಂದೆರಡು ಬಾರಿ ಹಟ್ಟಿಗೆ ಸ್ವತಃ ಇಳಿದು ಖುಷಿಯಿಂದ ಗೋದಾವರಿಯ ಮೈಯನ್ನು ಪೂಸಿ ಅದರ ಕರುವನ್ನು ಮುದ್ದಿಸಿ ಚೆನ್ನಾಗಿ ಸಾಕಿದ್ದೀರಿ ಎಂಬ ಶಿಫಾರಸ್ಸನ್ನೂ ಮಾಡಿ ಮಜ್ಜಿಗೆ ನೀರಿದ್ದರೆ ಕೊಡಿ ಅಕ್ಕರೇ. ಕುಡಿದು ಹೋಗುತ್ತೇನೆ ಎನ್ನತೊಡಗಿದ. ಸುಶೀಲಮ್ಮ ಕೊಡುತ್ತಿದ್ದ ಮಜ್ಜಿಗೆ ನೀರು ಕುಡಿದ ಬಡವಕುಞ್ಞ ಲೋಟವನ್ನು ತೊಳೆದು ಕವುಚಿ ಹಾಕಿ ಬರ್ತೆನೆ ಎಂದು ಹೋಗುತ್ತಿದ್ದ.

ಗೋದಾವರಿ ಎರಡು ವರುಷ ಪೂರ್ತಿ ಹಾಲು ನೀಡಿ ಮತ್ತೆ ಗಬ್ಬ ಧರಿಸಿದಾಗ ಅದರ ಕರು ಕಾವೇರಿಯೂ ಬೆಳೆದು ಹೋರಿಗಾಗಿ ಕೂಗ ತೊಡಗಿತು. ಮೊದಲ ಸಲ ಅದು ಕೂಗಿದಾಗ ಪಶುವೈದ್ಯರನ್ನು ಕರೆತರಿಸಲು ಅಸಾಧ್ಯವಾಗಿ ಮುಂದಿನ ಸಲ ಶಂಭಟ್ಟರ ಮೂಲಕವಾದರೂ ಆ ವ್ಯವಸ್ಥೆ ಮಾಡಿಕೊಳ್ಳಬೇಕೆಂದು ಸುಶೀಲಮ್ಮ ಅದಕ್ಕಾಗಿ ಮತ್ತೆ ಲೆಕ್ಕ ಹಾಕುತ್ತಿದ್ದರು.

ಆ ದಿನ ಬೆಳಗ್ಗೆ ಕಾವೇರಿಯನ್ನು ಹಗ್ಗ ಹಾಕಿ ಅಂಗಳದಾಚೆಯ ಬಯಲಲ್ಲಿ ಮೇವಿಗೆ ಕಟ್ಟಬೇಕು ಎಂದು ಸುಶೀಲಮ್ಮ ಹೊರಟು ಹಟ್ಟಿಯ ಬಾಗಿಲು ತೆರೆಯುತ್ತಿದ್ದಂತೆ, ಸುಶೀಲಮ್ಮನ ಕೈಯಲ್ಲಿದ್ದ ಹಗ್ಗವನ್ನು ದರದರನೆ ಎಳೆದುಕೊಂಡ ಕಾವೇರಿ ದಢಕ್ಕನೆ ಹಿಂಗಾಲು ಎತ್ತಿ ಕುಣಿದು ಬಯಲಿನಾಚೆ ನೆಗೆಯಿತು. ಅಯ್ಯೋ ದೇವರೇ ಈಗೇನು ಮಾಡುವುದು? ಎಂದು ಆಕೆ ಯೋಚಿಸುವಷ್ಟರಲ್ಲಿ ಕಿವಿಗೆ ಗಾಳಿ ಹೊಕ್ಕ ಹಾಗೆ ಅಲ್ಲಿ ಇಲ್ಲಿ ಓಡಾಡಿದ ಕಾವೇರಿ ಸುಶೀಲಮ್ಮನ ಮನೆಯ ಹಿಂದಿನ ಧರೆಯಾಚೆ ಒಂದೇ ಸವನೆ ಓಡತೊಡಗಿತು. ದೇವರೇ, ದೇವರೇ, ದೇವರೇ ಕಾಪಾಡು! ಎಂದು ಸುಶೀಲಮ್ಮ ದೇವರನ್ನು ಪ್ರಾರ್ಥಿಸಿಕೊಳ್ಳುವಷ್ಟರಲ್ಲಿ ಕಾವೇರಿ ಧರೆಯಿಂದ ಕೆಳಗೆ ನೆಗೆದಾಗಿತ್ತು. ಕ್ಷಣಾರ್ಧದಲ್ಲಿ ಕುಸಿದು ಬಿದ್ದ ಕರು ಅಲ್ಲಿಂದ ಏಳಲಾಗದೆ ಚಡಪಡಿಸುವುದನ್ನು ಗಮನಿಸಿದ ಸುಶೀಲಮ್ಮ ಇದರ ಕತೆ ಮುಗಿದ ಹಾಗೆ ಎಂದುಕೊಂಡು ಗಾಬರಿಯಲ್ಲಿ ಶಂಭಟ್ಟರಲ್ಲಿಗೆ ಓಡಿ ಬಂದಿದ್ದರು.

ಶಂಭಟ್ಟರು ಮತ್ತು ಅವರ ಪತ್ನಿ ಶಂಕರಿ ಅಮ್ಮ ಹಾಗೂ ಸುಶೀಲಮ್ಮ ಮೂವರೂ ಸೇರಿ ಕಾವೇರಿಯನ್ನು ಎದ್ದು ನಿಲ್ಲಿಸಲು ಪ್ರಯತ್ನಿಸಿದಾಗ ಅದು ಹಿಂದಿನ ಒಂದು ಕಾಲನ್ನು ಊರಲು ಪ್ರಯತ್ನಿಸಿತಾದರೂ ಯಾಕೋ ಅದು ನಿಲ್ಲಲಾರದೆ ಕುಸಿದು ಬಿತ್ತು. ಶಂಭಟ್ಟರು 'ಗೋ ಡಾಕ್ಟ್ರನ್ನು ಕರೆಸೋಣ ಹೆದರಬೇಡಿ' ಎಂದು ಸುಶೀಲಮ್ಮನಿಗೆ ಹೇಳಿ ಮನೆಗೆ ಹೋಗಿ ಒಬ್ಬ ಕೂಲಿಯಾಳನ್ನು ಗೋ ಆಸ್ಪತ್ರೆಗೆ ಕಳುಹಿಸಿದರು. ಶಂಕರಿ ಅಮ್ಮ ಸುಶೀಲಮ್ಮನಿಗೆ ಸಾಕಷ್ಟು ಸಾಂತ್ವನ ಹೇಳಿ ದೇವರು ಕೈ ಬಿಡಲಾರ ಎಂಬ ನಂಬಿಕೆಯಲ್ಲಿ ತಮ್ಮ ಮನೆಗೆ ಮರಳಿದರು.

ಸಂಜೆಯ ಹೊತ್ತಿಗೆ ಬಂದ ಪಶು ವೈದ್ಯರು ಕರುವನ್ನು ಪರೀಕ್ಷಿಸಿ ಅದರ ಬಲದ ಕಾಲು ಮುರಿದ ಹಾಗಾಗಿದೆ.. ನಿಧಾನವಾಗಿ ಅದು ಸರಿ ಹೋಗಬಹುದು. ಎಂದು ಹೇಳಿ ಅದಕ್ಕೆ ಏನೇನು ಮಾಡಬಹುದು ಎನ್ನುವ ಸಲಹೆಯನ್ನೆಲ್ಲ ನೀಡಿ ನೀವು ದಿನಕ್ಕೆ ಎರಡು ಬಾರಿಯಾದರೂ ಕರುವನ್ನು ಮಗ್ಗಲು ಮಗುಚಬೇಕು. ಸಾಧ್ಯವಾದರೆ ಎದ್ದು ನಿಲ್ಲಿಸಬೇಕು, ಆ ಹೊತ್ತಿನಲ್ಲಿ ಅದು ಕಾಲೂರದ ಹಾಗೆ ಅದಕ್ಕೆ ಸಪೋರ್ಟ್ ಆಗಿ ಏನಾದರೂ ಮಾಡಬೇಕು ಎಂಬುದನ್ನು ವಿಷದವಾಗಿ ವಿವರಿಸಿ ಹೊರಟು ಹೋದರು.

ಸುಶೀಲಮ್ಮನಿಗೆ ಈ ಗೋ ಡಾಕ್ಟ್ರ ಮಾತೂ ಯಾವುದೂ ಪ್ರಾಕ್ಟಿಕಲ್ ಅಂತ ಅನಿಸಲಿಲ್ಲ. ಅವರಲ್ಲಿ ಈ ಕರು ನರಳಿ ನರಳಿ ಸಾಯುವುದೇ ಸರಿ, ಎಂಬ ಭಾವ ಮುಂದೆ ಬಂತು. ಇದನ್ನು ತಾನು ಎರಡು ಕಣ್ಣಿಂದ ನೋಡುವುದು ಹೇಗೆ? ಎಂದು ನೊಂದುಕೊಂಡು 'ಈ ವಿಚಾರವನ್ನು ಪುರೋಹಿತರಲ್ಲಿ ಹೇಳೋಣ' ಎಂದು ಆಕೆ ಅಲ್ಲಿಗೆ ನಡೆದು 'ಸ್ವಾಮಿ, ಕತೆ ಹೀಗಾಗಿದೆ!' ಎಂದು ಹೇಳಿ ಕೈ ಮುಗಿದರು.

ಪುರೋಹಿತರು 'ಏನೂ ಗಾಬರಿ ಮಾಡಬೇಡಿ ಸುಶೀಲಮ್ಮ, ಇಂಥಾದ್ದೇ ಎರಡು ಕೇಸು ನನ್ನ ತಿಳುವಳಿಕೆಯಲ್ಲಿ ಆಗಿ ಹೋಗಿದೆ. ಕಾಲು ಮುರಿದ ಎರಡು

## ಕೊಬ್ಬು

ಅನಗತ್ಯ ಕೊಬ್ಬು
ಬೇಡವೇ ಬೇಡ
ವ್ಯಕ್ತಿತ್ವಕ್ಕೂ..
ಆರೋಗ್ಯಕ್ಕೂ..

★ ಡಾ.ವಿನಯ ಶ್ರೀನಿವಾಸ್



ಚಿತ್ರ: ಶಿಲ್ಪಾ ಕಬ್ಬಿಣಕಂತಿ